"ಕಾರ್ಮಿಕರ ಬಸ್ಸಿಗೆ ಪಾಸು. ಇದು ಆಫೀಸರ್ಸ್ ಬಸ್. ಇಳೀರಿ ಕೆಳಗೆ..." ಮುಲಾಜೇ ಇಲ್ಲದೆ ಕೆಳಗಿಳಿಸಿ 'ಬುರ್' ಎಂದು ಬಸ್ಸು ಬಿಟ್ಟುಕೊಂಡು ಹೊರಟೇ ಬಿಟ್ಟ.

ಇದೇನೂ ದೊಡ್ಡ ವಿಷಯವಲ್ಲ. ಎಲ್ಲರಿಗೂ ಡ್ರೈವರ್‌ನಿಂದ ಇಂಥಾ ಪೂಜೆ ಆಗಿಂದಾಗ್ಗೆ ಆಗುತ್ತಿರುತ್ತದೆ. ಆದರೇಕೋ ಈ ಘಟನೆ ಮುಳ್ಳಿನಂತೆ ನನ್ನ ಎದೆಯಲ್ಲಿ ಹುಗಿದುಕೊಂಡು ನೋಯತೊಡಗಿತು. ಎಷ್ಟೋ ದಿನದಿಂದ ರವಿಯ ಬಗೆಗಿದ್ದ ನನ್ನ ಏರುಪೇರಿನ ಭಾವನೆಗಳ ಘನೀಕರಿಸತೊಡಗಿತು.

ರವಿಯೇನೋ ಮಾಮೂಲಿನಂತೆ ಇಳಿದು ಹೋಗಿದ್ದ. ಸಂಜೆ ಸಿಕ್ಕಾಗಲೂ ಅಪಮಾನ ಏನೊಂದು ಆದವನಂತೇನೂ ಅಳುಕಿರಲಿಲ್ಲ.

"ಬಿ.ಟಿ.ಎಸ್. ಹಿಡಕೊಂಡು ಬಂದೆ. ಶಿವಾಜಿನಗರ ತಲುಪಿ ಇನ್ನೊಂದು ಬಸ್ ಬದಲಾಯಿಸಿ ಕಾರ್ಖಾನೆಗೆ ಬಂದು 'ಪಂಚ್' ಮಾಡೋವರಷ್ಟರಲ್ಲಿ ಒಂದು ಗಂಟೆ ತಡವಾಗಿತ್ತು..." ಎಂದೇನೋ ಆರಾಮವಾಗಿ ಸ್ವಲ್ಪವೂ ಸಂಕೋಚವಿಲ್ಲದೆ ಹೇಳಿದ್ದ.

"ಮೊದಲೇ ಬಿ.ಟಿ.ಎಸ್. ಹಿಡಿಯೋಕೆ ಏನಾಗಿತ್ತು? ಸುಮ್ಮನೆ ಆ ಡ್ರೈವರ್ ಹತ್ತಿರ ಅನ್ನಿಸಿಕೊಳ್ಳೋದೇಕೆ?" ನನ್ನೊಳಗಿನ ಅಸಮಾಧಾನ ಹೊರಬಿತ್ತು. ಅದು ರವಿಯನ್ನು ತಟ್ಟಿದಂತೇನೂ ಕಾಣಲಿಲ್ಲ.

"ಅಯ್ಯೋ ಎಲ್ಲ ಡ್ರೈವರೂ ಹಾಗಿರೋಲ್ಲ. ಅವನೊಳ್ಳೆ ತಿಕ್ಕಲು. ಎರಡು ರೂಪಾಯಿ ಜೇಬಿಗೆ ಹಾಕಿದ್ರೆ ಹತ್ತಿಸಿಕೊಳ್ತಾ ಇದ್ದ. ಎಷ್ಟು ಬಾರಿ ಆಫೀಸರ್ಸ್ ಬಸ್‌ನಲ್ಲೇ ಬಂದಿದೀನಿ..." ಕೊಚ್ಚಿಕೊಂಡ.

ಅವನಿಗೆ ಅದೆಲ್ಲ ಅವಮಾನ, ಅಪಮಾನ ಅನಿಸಿಯೇ ಇರಲಿಲ್ಲ. ಮತ್ಯಾರೂ ಅದನ್ನು ಗಮನಿಸಿರಲಿಕ್ಕೂ ಇಲ್ಲ. ಆದರೇಕೋ ಇದೊಂದು ಘಟನೆ, ನನ್ನ ತಲೆ ಹೊಕ್ಕಿತು – ಕೊರೆವ ಕೀಟವಾಗಿ.

★★★

ರವಿ, ನನ್ನ ದೂರದ ಸಂಬಂಧಿ. ನಾಳೆ ನನ್ನ ಗಂಡನಾಗುವವನು. ಅವನು ನನ್ನ ಕಾರ್ಖಾನೆಯ ಸಾಮಾನ್ಯ ಕಾರ್ಮಿಕ.

ಹದಿನಾರಕ್ಕೆ ಎಲ್ಲವನ್ನೂ ಬಲ್ಲ ಬ್ರಹ್ಮನಾಗಿದ್ದ ರವಿ. ನನ್ನಿಂದ ಮೇಲೆ ಅಷ್ಟೆತ್ತರವಾಗಿ ಕಂಡ ರವಿ, ನನ್ನೆಲ್ಲ ಕನಸುಗಳಿಗೆ ಕೇಂದ್ರವಾಗಿದ್ದು, ಅಂತರಿಕ್ಷದಿಂದ ಕಳಚಿ ಬಿದ್ದ ಅಯಸ್ಕಾಂತದ ತುಂಡಾಗಿದ್ದ ರವಿ – ಈಗ ನನ್ನ ಇಪ್ಪತ್ತನಾಲ್ಕರ ಪ್ರಾರಂಭದಲ್ಲಿ ಏಕಿಷ್ಟು ಸಾಧಾರಣವಾಗಿ ಕಾಣುತ್ತಾನೆ!

ನನಗೆ ಗೊತ್ತು, ಬದಲಾದದ್ದು ಅವನಲ್ಲ – ನಾನು ಮತ್ತು ನನ್ನ ಪರಿಸರ. ಈ ಬದಲುಗೊಂಡ ವಾತಾವರಣದ ನಡುವೆ ಅವನೊಬ್ಬ ಸ್ಥಿತಪ್ರಜ್ಞ, ಸ್ಥಿರಬಿಂದು. ಹಿಗ್ಗದ– ಕುಗ್ಗದ ಸ್ಥಗಿತ ಬಿಂದು!

ನನ್ನ ಹದಿನಾರನೇ ವಯಸ್ಸಿನಲ್ಲಿ ಅಪ್ಪ ವರ್ಗವಾಗಿ ಬೆಂಗಳೂರಿಗೆ ಬಂದಾಗ ಪ್ರತಿ ಭಾನುವಾರ ನಾನು ಓಡುತ್ತಿದ್ದುದು ರವಿ ಮನೆಗೆ. ಅವನ ಬಳಿಯಲ್ಲಿ ಒಂದು ಪಿ.ಸಿ. (ಪರ್ಸನಲ್ ಕಂಪ್ಯೂಟರ್) ಇತ್ತು. ಎಂಟು ವರ್ಷಗಳ ಹಿಂದೆ ಇಂದಿನಷ್ಟು ಪಿ.ಸಿ. ಬೀದಿಗೊಂದು, ಗಲ್ಲಿಗೊಂದು ಸಿಗುವ ಸಾಮಾನ್ಯ ವಸ್ತುವಾಗಿರಲಿಲ್ಲ. ರವಿಯ ಸ್ನೇಹಿತನಾರೋ ಸಿಂಗಪುರದಿಂದ ತಂದು ಕೊಟ್ಟಿದ್ದ. ಅವನ ಬೆರಳುಗಳು ಪಿ.ಸಿ.ಯ 'ಕೀಬೋರ್ಡ್' ಮೇಲೆ ಪಟಪಟ